ಕುಳಿತವರೆಲ್ಲ ಮಾಯವಾಗಿ, ಇಡೀ ಜಗತ್ತಿನಲ್ಲಿ ಈ ಪುಟ್ಟ ಬಾಲೆ ಒಬ್ಬಳೇ ಇದ್ದಾಳೇನೊ ಅನ್ನಿಸಿಬಿಟ್ಟಿತು. ಹಿಂದೆಯೂ ಕೆಲವು ಬಾರಿ ಈ ಬಾಲಕಿಯ ಸ್ಪರ್ಶ ಸುಖ ಪಡೆದಿದ್ದ. ಅವಳಿಗೂ ತಾಯಿಯನ್ನು ಬಿಟ್ಟರೆ ಮತ್ಯಾರೂ ಹೀಗೆ ಪ್ರೀತಿ ತೋರಿದ ಅನುಭವವಾಗಿರಲಿಲ್ಲ. ಬರಿಯ ಪ್ರೀತಿಯ ಪ್ರದರ್ಶನ ಅವನು ಮಾಡುತ್ತಿರಲಿಲ್ಲ. ಮಾತೂ ಕೂಡ ಮಿತವೇ ಇರುತ್ತಿತ್ತು. ಆದರೆ ಅವನ ಕಣ್ಣು, ದೇಹ ಭಾವ, ಪ್ರೀತಿಯ ವರ್ಷಧಾರೆಯನ್ನೇ ಎರೆದುಬಿಡುತ್ತಿತ್ತು. ಅದರಲ್ಲಿ ತೊಯ್ದು ಹೋದ ಪಾಪು ಅವನನ್ನು ಕಂಡರೆ ಮೆಲ್ಲ ಮೆಲ್ಲನೆ ಸಮೀಪಕ್ಕೆ ಬರಲು ಯತ್ನಿಸುತ್ತಿದ್ದಳು.

ಗಂಗೆ ಮಾತ್ರ ಈ ಹುಡುಗಿಯಿಂದ ಅವನಿಗೆಲ್ಲಿ ಮೈಲಿಗೆಯಾಗಿ ಬಿಡುವುದೊ ಎಂದು ನಿಗಾ ವಹಿಸುತ್ತಿದ್ದಳು. ಆದರೂ, ತಾಯಿಯ ಕಣ್ಣು ತಪ್ಪಿಸಿ ಅದೆಷ್ಟೋ ಬಾರಿ ಅವನನ್ನು ಮುಟ್ಟಿ ಬಿಡುತ್ತಿದ್ದಳವಳು. ಆಗ ಅವನ ಮಮತೆಯ ಕಣ್ಣಿನ ರಕ್ಷಾಕವಚ ದೊರೆಯದೇ ಇರುತ್ತಿರಲಿಲ್ಲ.

ಪ್ರಸಾದ, ಪ್ರೀತಿ ಮಾಯಾ ಸ್ವಪ್ನದಿಂದ ಎಚ್ಚರ ಸ್ಥಿತಿಗೆ ಬಂದಾಗ ಅವನ ಕಣ್ಣು ಅಲ್ಲಿ ಕುಳಿತಿದ್ದವರ ಕಡೆಗೆ ಹೋಯಿತು. ಗಂಗೆ ಹೊರತಾಗಿ ಮತ್ಯಾರೂ ಅವನನ್ನು ಗಮನಿಸಿಯೇ ಇರಲಿಲ್ಲ. ಶಿವಣ್ಣ, ಸುನಂದ ಬನ್ನಪ್ಪನವರಲ್ಲಿ ಅದೇನೊ ಮಾತಲ್ಲಿ ತಲ್ಲೀನನಾಗಿದ್ದ. ತಂದೆ, ಮನೆ ವಿಷಯ ಮಂಡನೆ ಮಾಡಲು ತವಕಿಸುತ್ತಾ, ಶಿವಣ್ಣ ಯಾವಾಗ ತನ್ನ ಮಾತು ನಿಲ್ಲಿಸುತ್ತಾನೊ ಎಂದು ಅಸಹನೆ ಪಡುತ್ತಲಿದ್ದರು. ಅದನ್ನು ಸೂಕ್ಷ್ಮವಾಗಿ ಗಮನಿಸಿಕೊಂಡು, ಪ್ರಸಾದ ಆ ಬಾಲೆಯ ಬೈತಲೆ ಮೇಲೆ ಕೈ ಇಟ್ಟ ಅದೂ ತೃಪ್ತಿ ಆಗದೆ ಅತ್ತ ಇತ್ತ ಗಮನಿಸಿ ಸರ್ರನೆ ಒಂದು ಮುತ್ತು ತಲೆ ಮೇಲೆ ಒತ್ತಿಬಿಟ್ಟ.

ಪಾಪು ಆನಂದದಿಂದ ಸ್ಮಿತವದನೆಯಾದಳು. ಅಷ್ಟಲ್ಲದೆ ಖುಷಿ ಹೆಚ್ಚಾಗಿ ತಾಯಿ ಬಳಿಗೆ ಮಿಂಚಿನಂತೆ ಓಡಿ ಕೈ ಚಪ್ಪಾಳೆ ಹೊಡೆದಳು.

ಶ್ರೀಧರ ಭಟ್ಟರು ಆ ಚಪ್ಪಾಳೆ ಸದ್ದಿಗೆ ತಮ್ಮ ಧ್ಯಾನದಿಂದ ಈಚೆಗೆ ಬಂದರು.

'ಇದೇನು ಹೀಗಾಡುತ್ತೆ ಈ ಹುಡ್ಗಿ...? ಯಾಕೆ ಚಪ್ಪಾಳೆ ತಟ್ಟಿ ಓಡಿ ಬಂದ್ಳು?... ಏನಾಯ್ತವ್ಳಿಗೆ...?'

ಶಿವಣ್ಣನ ಗಮನವೂ ಆ ಸಣ್ಣ ಹುಡುಗಿ ಕಡೆಗೇ ಹೋಯಿತು.

'ಹುಚ್ಚು ಖೋಡಿ ಪೋರಿ ಅದಾಳ...! ಬಸ್ವಿ ಮಗ್ಳು...! ಮುಂದೆ ಅಮ್ಮನ ಹಂಗೇ ಆದಾಳು...! ಸೂಳೆ ಮಗ್ಳು' ಎಂದು ಮನಸ್ಸಿನಲ್ಲೇ ಕೂಸನ್ನೂ, ಅದರ ತಾಯಿಯನ್ನೂ ಒದ್ದ.

ತನ್ನ ಇಂದ್ರ ಗಾಂಧೀಯನ್ನು ಭದ್ರವಾಗಿ ಹಿಡಿದುಕೊಂಡು ಗಂಗ ಹೇಳಿದಳು.

'ಮ್ಯಾಡಂನಾರಾ... ನಾ ಹೋಗ್ತೀನ್ರಿ... ಕಸೂತಿ ಹಚ್ಚಿದ ಅರಿವೆನೆಲ್ಲಾ ಇಲ್ಲೇ ಇಟ್ಟೀನ್ರಿ... ನೋಡ್ಕಳ್ರಿ.... ಎಂದು ಬಟ್ಟೆಗಳನ್ನು ಹರಡಿ ತೋರಿದಳು. ಸುನಂದ ಅವರಿಗೆ ಕಸೂತಿಯಲ್ಲಿ ಅವಳ ಕೈಚಳಕ ನೋಡಿ ಮೆಚ್ಚುಗೆಯಾಯಿತು. ಅವರೆಂದರು.'

'ತುಂಬಾ ಚೆನ್ನಾಗಿ ಹೊಲಿದಿದ್ದೀ ಗಂಗಾ... ಸೊಸೈಟಿಗೆ ತಲುಪಿಸಿ ನಿನ್ನ ಕೂಲಿ ಹಣ ಕೊಡಿಸ್ತೀನಿ... ಬುಧವಾರ ಬಾ. ಆಗ ಇನ್ನೊಂದಷ್ಟು ಆರ್ಡರ್ ಬೆಂಗ್ಳೂರಿಂದ ಬರತ್ತೆ...'

'ಆಯ್ತು... ಉಪಕಾರ ಆತು... ನಮಸ್ಕಾರರೀ...'

ಸುನಂದ ತಮ್ಮ ಕೈಗಡಿಯಾರ ನೋಡಿಕೊಳ್ಳುತ್ತಾ... 'ಗಂಗಾ...' ಎಂದು ಕರೆದರು.

'ಯಾನ್ರವ್ವಾ...?'

'ನೀನು ಮುಂದೆ ನಿನ್ನ ಮಗಳ ಬಗ್ಗೆ ಚಿಂತೆ ಮಾಡಬೇಡ... ಮೈಸೂರಲ್ಲೂ ಇವಳಿಗೆ ತಕ್ಕನಾದ ಶಾಲೆ ಇರಬಹುದು... ಅದನ್ನು ಹುಡುಕುತ್ತೀನಿ. ಅದಕ್ಕೆ ಮುಂಚೆ ಅವ್ಳನ್ನ ಡಾಕ್ಟರಿಗೆ ತೋರ್ಸೋಣ... ಬುಧವಾರ ಹೇಗೂ ಬರ್ತಿಯಲ್ಲಾ... ಅಷ್ಟರವೇಳೆಗೆ ಎಲ್ಲಾ ವಿಚಾರ್ಸಿ ಇಟ್ಟಿರ್ತೀನಿ...'

'ಆಯ್ತು...' ಎಂದು ಎಲ್ಲರಿಗೂ ಕೈ ಮುಗಿದು ಹೊರಟಳು. ಬಾಗಿಲು ದಾಟುವಷ್ಟರಲ್ಲಿ ಸುನಂದ ಬನ್ನಪ್ಪ ಮತ್ತೊಮ್ಮೆ ಕೈಗಡಿಯಾರ ನೋಡಿಕೊಳ್ಳುತ್ತ.

'ಓ... ಲೇಟಾಗಿ ಹೋಯ್ತು ನನಗೆ!... ಇನ್ನೊಂದು ಅರ್ಜೆಂಟು ಮೀಟಿಂಗ್ ಇದೆ!...'

ತಡವರಿಸುತ್ತಾ ಶ್ರೀಧರ ಭಟ್ಟರು ಬಾಯಿ ತೆರೆದರು, 'ಸುನಂದಮ್ಮನೋರೆ ನನ್ನ ಮನೆ ಹಾಳು ಬೀಳ್ತಾ ಇದೆ. ಅದರ ರಿಪೇರಿ ವಿಷಯ ನಿಮಗೆ ಹೇಳೋಣ ಅಂತ ಬಂದೆ...'

'ಈಗ ನಂಗೆ ಟೈಂ ಇಲ್ಲ... ಇನ್ನೊಂದು ದಿನ ನಿಧಾನವಾಗಿ ಮಾತಾಡೋಣ...' ಎನ್ನುತ್ತಾ ನಡೆದೇ ಬಿಟ್ಟರು.

ಈಗ ಕೋಣೆಯಲ್ಲಿ ಮೂವರೇ ಉಳಿದವರು. ಒಬ್ಬೊಬ್ಬರಾಗಿ ಅವರೂ ಹೊರಟು ಮೆಟ್ಟಲು ಇಳಿಯುತ್ತಿರುವಾಗ ಶ್ರೀಧರ ಭಟ್ಟರ ಸಿಟ್ಟು ಶಿವಣ್ಣನ ಮೇಲೆ ಹರಿದು ಹೋಯಿತು.

'ಒಳ್ಳೆ ಕೆಲ್ಸಕ್ಕೆ ಹೊರಟಾಗ 'ನಾನೂ ಬರ್ತೀನಿ... ಎಲ್ಲಿ ಹೋಗ್ತಿದ್ದೀರಾ' ಅಂತ ಅಪಶಕುನ ಮಾಡಿಬಿಟ್ಟಲ್ಲ...! ಆಗ್ಲೇ ಅಂದ್ಕೊಂಡೆ ಈ ದಿನ ನನ್ನ ಕೆಲ್ಸ ಆಗೂದಿಲ್ಲ ಅಂತ... ಬಂದದ್ದು ಬೇರೆ ಮೂರು ಜನ...' ಗೊಣಗುತ್ತ, ಸಿಡಿಮಿಡಿ ಗುಟ್ಟುತ್ತಾ ಮಗನನ್ನೂ ಬಯ್ಯುತ್ತಾ ದಾಪುಗಾಲು ಹಾಕಿದರು. ಪ್ರಸಾದ, ಶಿವಣ್ಣ ತುಟಿ ಬಿಚ್ಚದೆ ಅವರನ್ನು ಅನುಸರಿಸಿಬಿಟ್ಟರು.

**9**

**ಶಿವಣ್ಣನ ನಾಟಿ ಔಷಧಿ**

ಶಿವಣ್ಣ ಗ್ರಾಮೀಣ ನಾಟೀ ಔಷಧಿ ಕೊಡುತ್ತಿದ್ದರೆ, ಕೆಳ ಮಧ್ಯಮ ವರ್ಗದ ಬಡವರು ನಂಬಿಕೆಯಿಂದಲೇ ಕಾಯಿಲೆ ವಾಸಿ ಮಾಡಿಕೊಂಡು ಹೋಗುತ್ತಿದ್ದುದು ಉಂಟು. ಅದು ಅವಿದ್ಯಾವಂತ ಮುಗ್ಧತೆ ಪರಿಣಾಮ ಇದ್ದರೂ ಇರಬಹುದು. ಅದಲ್ಲದೇ, ಆಸ್ಪತ್ರೆಗೆ ಹೋಗಿ ಅಲ್ಲಿ ಒಂದು ಕಾಯಿಲೆ ಹೇಳಿದರೆ ಹತ್ತಾರು ಪರೀಕ್ಷೆಗಳಿಗೆ ಬಡ್ಡಿ ಹಣ ಸೆಳೆಯುತ್ತಿದ್ದರು. ಬೇಡ, ಸರ್ಕಾರಿ ಆಸ್ಪತ್ರೆಗೆ ಹೋದರೆ ಖರ್ಚು ಇರೊಲ್ಲ ಎಂದರೆ ಅಲ್ಲಿ ಮೋಸದ ವ್ಯವಹಾರವಷ್ಟೇ. ಕಾಯಿಲೆ ವಾಸಿ ಮಾಡುವ ನಂಬಿಕೆ ಇರುತ್ತಿರಲಿಲ್ಲ. ಆಸ್ಪತ್ರೆಗೆ ದಾಖಲಾದರೆ ನರಕಕ್ಕೆ ಹೋದ ಅನುಭವ ಆಗುತ್ತಿತ್ತು. ಬೇರೆ ಚಿಕಿತ್ಸೆ ಪಡೆಯೋಣವೆಂದು ಹೋಮಿಯೋಪತಿ, ಆಯುರ್ವೇದ, ಯುನಾನಿಗೆ ಹೋಗಲು ಕೆಲವರು ಇಚ್ಚಿಸಿದರೆ, ಮಿಕ್ಕವರಿಗೆ ಅದರಲ್ಲೂ ನಂಬಿಕೆ ಇರಲಿಲ್ಲ. ಹೀಗಾಗಿ ಶಿವಣ್ಣ ವೇಗವಾಗಿ ಬಡಕಾಯಿಸ ತೊಡಗಿದ. ಆದರೆ ಅದೇನೂ ಸರಳ ರೇಖೆಯಾಗಿರಲಿಲ್ಲ. ಕೆಲವರು ಅವನು 'ಕೈ ಮಸುಕು' ಮಾಡಬಲ್ಲ ಕೆಟ್ಟ ಚಟವುಳ್ಳ ವೈದ್ಯ ಎಂಬ ಅನುಮಾನ ಹರಡುತ್ತಿದ್ದರು.

'ಕೈಮಸಕು' ಅಂದಿನ ಕಾಲದಲ್ಲಿ ಗ್ರಾಮೀಣರಲ್ಲಿ ದೊಡ್ಡ ಭಯ ಯಾರಿಗಾದರೂ ಮತ್ಯಾರ ಮೇಲಾದರೂ ದ್ವೇಷ ಭಯ' ಯಾರಿಗಾದರೂ ಮತ್ಯಾರ ಮೇಲಾದರೂ ದ್ವೇಷ ಇದ್ದರೆ ಶಿವಣ್ಣನಂತಹ ವೈದ್ಯರಲ್ಲಿ ಹೋಗಿ 'ಔಷಧಿ' ತಂದು ಪ್ರಯೋಗ ಮಾಡುತ್ತಿದ್ದರು. ಜನರ ಊಹೆ ಈ 'ಔಷಧಿ' ಬಗ್ಗೆ ಏನಿತ್ತೆಂದರೆ ಕೈಮಸಕು ಮಾಡುವವರು ಹೆಂಟೆ ಗೊದ್ದವನ್ನು ಹಿಡಿದು, ಅದನ್ನು ಬಾಣಲೆ ಮೇಲೆ ನೇತು ಹಾಕಿ ಉರಿ ಹಚ್ಚುವುದಂತೆ. ಆಗ ಅದರ ವಿಷವೆಲ್ಲಾ ಬಾಣಲಿಯಲ್ಲಿ ಬಿದ್ದು ಶೇಖರಗೊಳ್ಳುತ್ತಂತೆ. ಅದನ್ನು ಆಹಾರದಲ್ಲಿ ಬೆರೆಸಿ ಕೊಟ್ಟರೆ ತಿಂದವನಿಗೆ ಏನೂ ಅನುಮಾನ ಬರುತ್ತಿಲ್ಲ. ಆದರೆ ಆ ಬಲಿಪಶು ದಿನದಿನಕ್ಕೆ ನಿತ್ರಾಣವಾಗಿ ಸಾಯುವ ಸ್ಥಿತಿಗೆ ಬಂದು ಬಿಡುತ್ತಿದ್ದುದುಂಟು. ಕೂಡಲೇ ಆ ಪಾಷಾಣ ತೆಗೆಸಿದರೆ ಆರೋಗ್ಯ ಸುಧಾರಿಸಿಬಿಡುತ್ತಿತ್ತು. ಇದಕ್ಕೆ ಯಾರು ವಿಷ ಕೊಟ್ಟರೊ ಅವರೇ ಮರು ಔಷದೋಪಚಾರ ಮಾಡ ಬೇಕಾಗುತ್ತಂತೆ. ಮೀರಿ ಹೋದರೆ ಹೊಟ್ಟೆಯಲ್ಲಿ ಕೂದಲು ಬೆಳೆದು ಬಿಟ್ಟು ಹಸಿವು ಮುಚ್ಚಿ ಹೋಗಿ, ಏನನ್ನೂ ತಿನ್ನಲಾರದೆ ನವೆದು ಪ್ರಾಣ ಬಿಡುತ್ತಿದ್ದರಂತೆ. ಶಿವಣ್ಣ ಇಂತಹದೊಂದು ಮನೆಹಾಳ ಕೆಲಸವನ್ನೂ ಮಾಡುವುದನ್ನೂ ಬಿಟ್ಟು ಇಲ್ಲಿಗೆ ಬಂದು ಕಲಿತು ಹಣಕ್ಕಾಗಿ ಪ್ರಯೋಗ

**ಪ್ರತಿಫಲ**

ಒಂದು
ಗೆಲುವೆಂಬುದು
ಅನೇಕ ಸೋಲುಗಳ
ಪ್ರತಿಫಲ

★ಓಂಕಾರಯ್ಯ
ತವನಿಧಿ



ವಿಜಯ